# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಎನ್. ಆರ್. ಸುಬ್ರಮಣ್ಯ, ಹಿಂದಿನ ಸಹಾಯಕ ಕೃಷಿ ಅಧಿಕಾರಿ, ಒಣ ಭೂಮಿ ಅಭಿವೃದ್ಧಿ ಮಂಡಳಿ, ಸೋಮವಾರಪೇಟೆ, ಇವರು ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂ: ಕೃತೋಇ 80 ಕೃಪವಿ 1995 ದಿನಾಂಕ : 28-03-2000.
2. ಸರ್ಕಾರದ ಪತ್ರದ ಸಂ: ಕೃತೋಇ 79 ಕೃಫರಿ 2010. ದಿನಾಂಕ : 13-06-2011.
3. ಕೃಷಿ ಆಯುಕ್ತರ ಇಲಾಖಾ ಆದೇಶ ಸಂ: ಇಎಸ್‌ಟಿ-1/ಐಎನ್‌ಕ್ಯೂ-4/5/96-97 ದಿನಾಂಕ : 05-11-2011.
4. ಶ್ರೀ ಎನ್. ಆರ್. ಸುಬ್ರಮಣ್ಯ, ಹಿಂದಿನ ಸಹಾಯಕ ಕೃಷಿ ಅಧಿಕಾರಿ. ಇವರ ಮೇಲ್ಮನವಿ ದಿನಾಂಕ: 26-12-2011.
5. ಸರ್ಕಾರದ ಪತ್ರ ಸಂಖ್ಯೆ: ಕೃಇ 9 ಕೃಪವಿ 2012. ದಿನಾಂಕ: 17-04-2012.
6. ಕೃಷಿ ಆಯುಕ್ತರ ಪತ್ರ ಸಂ: ಇಎಸ್‌ಟಿ-1/ಐಎನ್‌ಕ್ಯೂ-4/5/96-97 ದಿನಾಂಕ : 11-06-2012..

*********

**ಪ್ರಸ್ತಾವನೆ:**

ಶ್ರೀ ಎನ್. ಆರ್. ಸುಬ್ರಮಣ್ಯ, ಇವರು ಸಹಾಯಕ ಕೃಷಿ ಅಧಿಕಾರಿಯಾಗಿ ಒಣ ಭೂಮಿ ಅಭಿವೃದ್ಧಿ ಮಂಡಳಿ, ಸೋಮವಾರ ಪೇಟೆ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಇವರು ಅಪಾರ ಪ್ರಮಾಣದಲ್ಲಿ ಸಂಪತ್ತು, ಆಸ್ತಿಯನ್ನು ಹೊಂದಿರುತ್ತಾರೆಂದು ಪೊಲೀಸ್ ಮಹಾ ನಿರ್ದೇಶಕರು, (ತನಿಖಾ ದಳ) ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ವರದಿ ಮಾಡಿರುವ ಪ್ರಕಾರ ಇವರನ್ನು ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅಭಿಯೋಜನಾ ಮಂಜೂರಾತಿ ನೀಡಲಾಗಿದೆ.

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಇವರು ವಿಶೇಷ ಪ್ರಕರಣ ಸ: 66/2000ರಲ್ಲಿ ದಿ: 01-09-2010ರಲ್ಲಿ ಲಂಚ ನಿರೋಧ ಕಾಯ್ದೆ 1988ರ ಕಾಲಂ 13 (1)(ಇ) ಸಹವಚನ 13(2)ರ ಅಡಿಯಲ್ಲಿ 3 ವರ್ಷ ಸೆರಮನೆ ಶಿಕ್ಷೆ ಹಾಗೂ ರೂ.75.000/- ದಂಡ, ದಂಡ ಕಟ್ಟಲು ತಪ್ಪಿದಲ್ಲಿ 10 ತಿಂಗಳ ಸಾದಾ ಸೆರಮನೆ ಶಿಕ್ಷೆಯನ್ನು ವಿಧಿಸಿರುತ್ತದೆ. ಈ ತೀರ್ಪಿನನ್ವಯ ಮಾನ್ಯ ಲೋಕ್ತಾಯುಕ್ತರು ಸದರಿ ಅಧಿಕಾರಿಯವರನ್ನು ಸೇವೆಯಿಂದ ವಜಾಮಾಡುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ತಿಳಿಸಿರುವ ಪ್ರಕಾರ ಸರ್ಕಾರದ ಸುತ್ತೋಲೆ ಪತ್ರದ ಸಂ: ಸಿಆಸುಇ 09 ಸೇಇವಿ 1995 ದಿ: 26-06-1996ರಂತೆ ಕ್ರಮಕೈಗೊಳ್ಳುವಂತೆ ಮೇಲೆ (2)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಕೃಷಿ ಆಯುಕ್ತರಿಗೆ ತಿಳಿಸಲಾಗಿದೆ.

ಸರ್ಕಾರದ ನಿರ್ದೇಶದನ್ವಯ ಕೃಷಿ ಆಯುಕ್ತರು ಮೇಲೆ (3)ರಲ್ಲಿ ಓದಲಾದ ತಮ್ಮ ಇಲಾಖಾ ಆದೇಶದಲ್ಲಿ ಸದರಿ ಅಧಿಕಾರಿಯವರನ್ನು ಸೇವೆಯಿಂದ ವಜಾಗೊಳಿಸಿ

--2--

ಆದೇಶಿಸಲಾಗಿರುತ್ತದೆ. ಸದರಿ ಆದೇಶದ ವಿರುದ್ಧ ಶ್ರೀ ಎನ್. ಆರ್. ಸುಬ್ರಮಣ್ಯ, ಸಹಾಯಕ ಕೃಷಿ ಅಧಿಕಾರಿ ಇವರು ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

1. ಕೃಷಿ ಆಯುಕ್ತರು ಆದೇಶ ಹೊರಡಿಸುವ ಮುನ್ನ ತಮಗೆ ನೋಟಿಸ್ ನೀಡಿ ಪ್ರಕರಣದ ಅಂಶಗಳ ಬಗ್ಗೆ ತಿಳಿಸಿ ಆದೇಶ ಹೊರಡಿಸಬೇಕಾಗಿದ್ದು, ಸದರಿ ಪ್ರಕ್ರಿಯೆ ನಡೆಸದೇ ಆದೇಶ ಹೊರಡಿಸಿರುವುದು ನಿಯಮಾವಳಿಯ ಮತ್ತು ಸಾಮಾಜಿಕ ನ್ಯಾಯದ ಉಲ್ಲಂಘನೆಯಾಗಿದ್ದು, ಸದರಿ ಆದೇಶವನ್ನು ತಡೆಹಿಡಿಯುವಂತೆ ಕೋರಿರುತ್ತಾರೆ.
2. ಅಪಾರ ಪ್ರಮಾಣದ ಆಸ್ತಿ ಮತ್ತು ಆದಾಯವನ್ನು ಹೊಂದಿರುವ ಬಗ್ಗೆ ತಮ್ಮ ಕುಟುಂಬದ ಒಟ್ಟು ಆದಾಯ, ಒಟ್ಟು ಖರ್ಚುವೆಚ್ಚಗಳನ್ನು ಗಣನೆಗೆ ತೆಗೆದುಕೊಳ್ಳದೇ ತಮ್ಮ ಮೇಲೆ ಹೂಡಿರುವ ದಾವೆಯು ಅಕ್ರಮವಾಗಿರುತ್ತದೆ. 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಇವರು ನೀಡಿರುವ ದಂಡನಾದೇಶವನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ಅಮಾನತ್ತಿನಲ್ಲಿರಿಸಿರುವುದರಿಂದ ಕೃಷಿ ಆಯುಕ್ತರು ಹೊರಡಿಸಿರುವ ದಂಡನಾದೇಶವು ಅಕ್ರಮವಾಗಿರುತ್ತದೆಂದು ವಾದಿಸಿದ್ದಾರೆ.
3. ಕೃಷಿ ಆಯುಕ್ತರು ತಮಗೆ ಯಾವುದೇ ಆರೋಪ ಪಟ್ಟಿಯನ್ನು ನೀಡದೇ ನೇರವಾಗಿ ಸೇವೆಯಿಂದ ವಜಾಗೊಳಿಸಿ ಹೊರಡಿಸಿರುವ ಆದೇಶವು ಸಂವಿಧಾನದ 311ನೇ ವಿಧಿಯ ಉಲ್ಲಂಘನೆಯಾಗಿರುತ್ತದೆ. ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ತರಿಸಿ ಪರಿಶೀಲಿಸಿ, ತಮ್ಮನ್ನು ಸೇವೆಯಿಂದ ವಜಾಮಾಡಿರುವ ದಂಡನಾದೇಶವನ್ನು ರದ್ದುಗೊಳಿಸಿ, ಕರ್ತವ್ಯಕ್ಕೆ ಪುನರ್ ನೇಮಿಸುವಂತೆ ಮತ್ತು ತಮಗೆ ಬರಬೇಕಾದ ತಮ್ಮ ಆರ್ಥಿಕ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ತಮ್ಮ ಮೇಲ್ಮನವಿಯಲ್ಲಿ ಕೋರಿರುತ್ತಾರೆ.

ಸದರಿ ಅಧಿಕಾರಿಯವರು ಸಲ್ಲಿಸಿದ ಮೇಲ್ಮನವಿಯ ಬಗ್ಗೆ ಮೇಲೆ (5)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಕೃಷಿ ಆಯುಕ್ತರ ಅಭಿಪ್ರಾಯ ಕೋರಲಾಗಿತ್ತು. ಮೇಲೆ (6)ರಲ್ಲಿ ಓದಲಾದ ಪತ್ರದಲ್ಲಿ ಸದರಿ ಮೇಲ್ಮನವಿದಾರರು ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಇದರ ತೀರ್ಪಿನ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್



--3--

ಪಿಟಿಷನ್ ಸಂ: 46479/2011 ರಲ್ಲಿ ದಾವೆ ಹೂಡಿರುತ್ತಾರೆ. ಸದರಿ ಅರ್ಜಿಯ ವಿಚಾರಣೆಯ ನಂತರ ಘನ ನ್ಯಾಯಾಲಯವು ಸದರಿ ಅರ್ಜಿಯನ್ನು ವಜಾಗೊಳಿಸಿರುತ್ತದೆ. ಈ ಹಿನ್ನಲೆಯಲ್ಲಿ ಸದರಿಯವರ ಮೇಲ್ಮನವಿಯನ್ನು ತಳ್ಳಿಹಾಕಲು ಅವಕಾಶವಿರುತ್ತದೆ ಎಂದು ಕೃಷಿ ಆಯುಕ್ತರು ಅಭಿಪ್ರಾಯ ಪಟ್ಟಿರುತ್ತಾರೆ.

ಕೃಷಿ ಆಯುಕ್ತರ ಅಭಿಪ್ರಾಯದಂತೆ ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ತನ್ನ ಅರ್ಜಿ ಸಂ: 46479/2011ರ ದಿ: 17-04-2012ರಲ್ಲಿ ನೀಡಿರುವ ತೀರ್ಪಿನಲ್ಲಿ ಶ್ರೀ ಎನ್. ಆರ್. ಸುಬ್ರಮಣ್ಯ, ಸಹಾಯಕ ಕೃಷಿ ಅಧಿಕಾರಿ ಇವರ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿರುವುದರಿಂದ ಮತ್ತು ಗ್ರೂಪ್-ಬಿ ವೃಂದದ ಅಧಿಕಾರಿಗಳಿಗೆ ದಂಡನೆ ವಿಧಿಸುವ ಶಿಸ್ತು ಪ್ರಾಧಿಕಾರ ಇಲಾಖಾ ಮುಖ್ಯಸ್ಥರೇ ಆಗಿರುತ್ತಾರೆಂಬುದನ್ನು ಗಣನೆಗೆ ತೆಗೆದುಕೊಂಡ ಸರ್ಕಾರ, ಅವರಿಗೆ ಇಲಾಖಾ ಮುಖ್ಯಸ್ಥರಾದ ಕೃಷಿ ಆಯುಕ್ತರು ಸೇವೆಯಿಂದ ವಜಾಗೊಳಿಸಿರುವ ದಂಡನಾದೇಶವನ್ನು ಸ್ಥಿರೀಕರಿಸಿ, ಸದರಿಯವರ ಮೇಲ್ಮನವಿಯನ್ನು ತಿರಸ್ಕರಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡಂತೆ ಆದೇಶ

**<u>ಸರ್ಕಾರದ ಆದೇಶ ಸಂಖ್ಯೆ: ಕೃಇ 9 ಕೃಪವಿ 2012</u>**
**<u>ಬೆಂಗಳೂರು, ದಿನಾಂಕ: 20-11-2012</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಎನ್. ಆರ್. ಸುಬ್ರಮಣ್ಯ, ಹಿಂದಿನ ಸಹಾಯಕ ಕೃಷಿ ಅಧಿಕಾರಿ, ಒಣ ಭೂಮಿ ಅಭಿವೃದ್ಧಿ ಮಂಡಳಿ, ಸೋಮವಾರಪೇಟೆ, ಇವರು ದಿನಾಂಕ: 26-12-2011ರಂದು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ಅಂಶಗಳು ಕಂಡು ಬರುವುದಿಲ್ಲವಾದ್ದರಿಂದ ಇಲಾಖಾ ಆದೇಶವನ್ನು ಸ್ಥಿರೀಕರಿಸಿ, ಸದರಿ ಅಧಿಕಾರಿಗಳ ಮೇಲ್ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

**<u>ಇವರಿಗೆ:</u>**

1. ಅಕೌಂಟ್ಸ್ ಆಫೀಸರ್, ಜಿಇ-5, ಮಹಾಲೇಖಪಾಲರ ಕಛೇರಿ, (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಹೊಸಕಟ್ಟಡ, ಬೆಂಗಳೂರು-1.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.

--4--

--4--

3. ಸಂಬಂಧಪಟ್ಟ ಅಧಿಕಾರಿಗೆ (ಆಯುಕ್ತರು, ಕೃಷಿ ಇಲಾಖೆ, ಇವರ ಮುಖಾಂತರ).
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
5. ಸರ್ಕಾರದ ಉಪ ಕಾರ್ಯದರ್ಶಿ–1, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.